# ಗಂಗಾಮಹಾತ್ಮೆ

## ಮನೋಗತ

ಪುಣ್ಯಸಲಿಲಾ ಗಂಗಾ ನದಿಯ ಮಹತ್ವವು ಅದ್ವಿತೀಯವಾಗಿದೆ ! ಭೌಗೋಳಿಕ ದೃಷ್ಟಿಯಿಂದ ಗಂಗಾ ನದಿಯು ಭಾರತವರ್ಷದ ಹೃದಯರೇಖೆಯಾಗಿದೆ ! ಇತಿಹಾಸದ ದೃಷ್ಟಿಯಿಂದ ಪ್ರಾಚೀನ ಕಾಲದಿಂದ ಆಧುನಿಕ ಕಾಲದ ವರೆಗೆ ಮತ್ತು ಗಂಗೋತ್ರಿಯಿಂದ ಗಂಗಾಸಾಗರದ ವರೆಗಿನ ಗಂಗೆಯ ಕಥೆ ಎಂದರೆ ಹಿಂದೂಗಳ ಸಭ್ಯತೆ ಮತ್ತು ಸಂಸ್ಕೃತಿಯ ಅಮೃತಗಾಥೆಯಾಗಿದೆ. ರಾಷ್ಟ್ರದ ದೃಷ್ಟಿಯಿಂದ ಆಚಾರ-ವಿಚಾರ, ವೇಷಭೂಷಣ, ಜೀವನಪದ್ಧತಿ ಮತ್ತು ವಿಭಿನ್ನ ಜಾತಿಯವರನ್ನು ಒಂದಾಗಿಸುವ ಗಂಗಾ ನದಿಯು ಹಿಂದೂಸ್ಥಾನದ ರಾಷ್ಟ್ರ-ಪ್ರತೀಕವೇ ಆಗಿದೆ. ಧಾರ್ಮಿಕದೃಷ್ಟಿಯಿಂದ ಇತಿಹಾಸದ ಉಷಃಕಾಲದಿಂದ ಕೋಟಿಕೋಟಿ ಹಿಂದೂ ಭಕ್ತರಿಗೆ ಮೋಕ್ಷವನ್ನು ಪ್ರದಾನಿಸುವ ಗಂಗಾ ವಿಶ್ವದ ಸರ್ವಶ್ರೇಷ್ಠ ತೀರ್ಥವಾಗಿದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಗೀತೆಗಿರುವ ಸ್ಥಾನವೇ ಗಂಗೆಗೆ ಧಾರ್ಮಿಕ ಕ್ಷೇತ್ರದಲ್ಲಿದೆ. ಈ ಗ್ರಂಥದಲ್ಲಿ ಪ್ರಮುಖವಾಗಿ ಗಂಗೆಯ ಮಹಾತ್ಮೆಯನ್ನು ವರ್ಣಿಸಲಾಗಿದೆ.

ಗಂಗಾ ಸರ್ವದೇವಮಯಿ, ಸರ್ವತೀರ್ಥಮಯಿ, ಸರಿತ್‌ಶ್ರೇಷ್ಠಾ ಮತ್ತು ಮಹಾನದಿಯಂತೂ ಆಗಿದ್ದಾಳೆ; ಆದರೆ ‘ಸರ್ವಪಾತಕನಾಶಿನಿ’ (ಎಲ್ಲ ಪಾಪಗಳನ್ನು ನಾಶ ಮಾಡುವವಳು) ಯು ಅವಳ ಮುಖ್ಯ ಪರಿಚಯವಾಗಿದೆ. ಜಗನ್ನಾಥ ಪಂಡಿತರು ಗಂಗೆಗೆ ಪ್ರಾರ್ಥನೆ ಮಾಡುವಾಗ ಹೀಗೆ ಹೇಳುತ್ತಾರೆ, ‘ಜಲಂ ತೆ ಜಂಬಾಲಂ ಮಮ ಜನನಜಾಲಂ ಜರಯತು ।’ ಅಂದರೆ ಗಂಗಾಮಾತೆ ! ಪಾಚಿ ಮತ್ತು ಕೆಸರಿರುವ ನಿನ್ನ ನೀರು ನನ್ನ ಪಾಪಗಳನ್ನು ದೂರಗೊಳಿಸಲಿ. (ಗಂಗಾಲಹರಿ, ಶ್ಲೋಕ ೨೦)’ ಪ್ರತಿಯೊಬ್ಬ ಹಿಂದೂವೂ ಆಯುಷ್ಯದಲ್ಲಿ ಒಮ್ಮೆಯಾದರೂ ಪತಿತಪಾವನ ಗಂಗೆಯಲ್ಲಿ ಸ್ನಾನ ಮಾಡುವ ಅಭಿಲಾಷೆಯನ್ನಿಡುತ್ತಾನೆ. ಹಿಂದೂ ಧರ್ಮವು ‘ಗಂಗಾಸ್ನಾನ’ವನ್ನು ಒಂದು ಧಾರ್ಮಿಕ ವಿಧಿ ಎಂದು ಪರಿಗಣಿಸಿದೆ. ಈ ವಿಧಿಯನ್ನು ಸುಲಭವಾಗಿ ಮಾಡಲು ಸಾಧ್ಯವಾಗಬೇಕೆಂದು ಈ ಗ್ರಂಥದಲ್ಲಿ ‘ಗಂಗಾಸ್ನಾನವಿಧಿ’ ಮತ್ತು ‘ಗಂಗಾಪೂಜಾವಿಧಿ’ಯನ್ನು ಸವಿಸ್ತಾರವಾಗಿ ಕೊಡಲಾಗಿದೆ.

ಗಂಗಾ ನದಿಯ ತೀರವು ತೀರ್ಥಕ್ಷೇತ್ರವಾಗಿದ್ದು ಅದು ಹಿಂದೂಗಳಿಗೆ ಅತಿ ವಂದನೀಯ ಮತ್ತು ಉಪಾಸನೆಗಾಗಿ ಪವಿತ್ರ ಸಿದ್ಧಿಕ್ಷೇತ್ರವೇ ಆಗಿದೆ. ಅದರ ಮಹಾತ್ಮೆಯನ್ನೂ ಈ ಗ್ರಂಥದಲ್ಲಿ ಸ್ಪಷ್ಟಪಡಿಸಲಾಗಿದೆ. ಗಂಗಾದರ್ಶನ, ಗಂಗಾಸ್ನಾನ ಮತ್ತು ಪಿತೃತರ್ಪಣ ಈ ಮಾರ್ಗಗಳಿಂದ ಮೋಕ್ಷವನ್ನು ಸಾಧ್ಯಗೊಳಿಸಬಹುದು ಎಂಬ ಸತ್ಯವನ್ನು ಧರ್ಮಾಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಗಂಗೋಪಾಸಕನು ಮಾಡಬೇಕಾದ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯ ಬಗ್ಗೆ ಈ ಗ್ರಂಥದಲ್ಲಿ ಸವಿಸ್ತಾರ ಮಾರ್ಗದರ್ಶನ ನೀಡಲಾಗಿದೆ. ಈ ಗ್ರಂಥವನ್ನು ಓದಿ ಸುರಸರಿತೆ (ದೇವನದಿ) ಗಂಗೆಯ ಬಗ್ಗೆ ಭಕ್ತರ ಭಾವಜಾಗೃತಿಯಾಗಬೇಕು ಮತ್ತು ಅವರಿಗೆ ಭಾವಪೂರ್ಣ ಗಂಗೋಪಾಸನೆ ಮಾಡಲು ಪ್ರೇರಣೆ ಸಿಗಬೇಕೆಂದು ಶ್ರೀ ಗಂಗಾದೇವಿಯ ಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

# ಅನುಕ್ರಮಣಿಕೆ

卐 ಮನೋಗತ ೬

卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೭

卐 ಪರಾತ್ಪರ ಗುರು ಡಾ. ಆಠವಲೆಯವರು ಸಂಕಲನ ಮಾಡುತ್ತಿರುವ ಮತ್ತು ಅಖಿಲ ಮನುಕುಲಕ್ಕೆ ಮುಂದಿನ ಸಾವಿರಾರು ವರ್ಷಗಳ ಕಾಲ ಮಾರ್ಗದರ್ಶಕವಾಗಲಿರುವ ಸನಾತನದ ಗ್ರಂಥಗಳ ನಿರ್ಮಿತಿಯ ಕಾರ್ಯದಲ್ಲಿ ಪಾಲ್ಗೊಳ್ಳಿ ! ೫೪

---

೧. 'ಗಂಗಾ' ಶಬ್ದದ ವ್ಯುತ್ಪತ್ತಿ ಮತ್ತು ಅರ್ಥ ೮

೨. ಬ್ರಹ್ಮಾಂಡದಲ್ಲಿ ಗಂಗಾ ನದಿಯ ಉತ್ಪತ್ತಿ ಮತ್ತು ಭೂಲೋಕದಲ್ಲಿ ಅವತರಣ ೮

೩. ಗಂಗೆಯ ಇತರ ಕೆಲವು ಹೆಸರುಗಳು ೧೦

೪. ವೈಶಿಷ್ಟ್ಯಗಳು ೧೧

೫. ಗಂಗೆಯ ಮಹತ್ವ ೨೧

೬. ಹಿಂದೂಗಳ ಜೀವನದರ್ಶನದಲ್ಲಿನ ಗಂಗೋದಕದ ಸ್ಥಾನ ೨೩

೭. ಗಂಗಾತೀರದಲ್ಲಿನ ತೀರ್ಥಕ್ಷೇತ್ರಗಳು ೨೫

೮. ಗಂಗಾಸ್ನಾನ ಮತ್ತು ಅದರ ಮಹತ್ವ ೩೦

೯. ಗಂಗಾಪರಿವಾರ ೩೪

೧೦. ಮೂರ್ತಿವಿಜ್ಞಾನ ೩೪

೧೧. ಭಕ್ತಾದಿಗಳು ಗಂಗೆಯ ಸಂದರ್ಭದಲ್ಲಿ ಮಾಡಬೇಕಾದ ವ್ಯಷ್ಟಿ ಸಾಧನೆ ೩೫

೧೨. ಭಕ್ತಾದಿಗಳು ಗಂಗೆಯ ಸಂದರ್ಭದಲ್ಲಿ ಮಾಡಬೇಕಾದ ಸಮಷ್ಟಿ ಸಾಧನೆ ೪೮

೧೩. ಭಾವೀ ಹಿಂದೂ ರಾಷ್ಟ್ರದಲ್ಲಿ ಗಂಗಾನದಿಯು ಪರಮಪವಿತ್ರವಾಗಿರುವುದು! ೫೨

**ಪುಣ್ಯನದಿ ಗಂಗೆಯ ರಕ್ಷಣೆಗಾಗಿ ಕೃತಿಶೀಲಗೊಳಿಸುವ ಸನಾತನದ ಗ್ರಂಥ**

**ದೇವನದಿ ಗಂಗೆಯನ್ನು ರಕ್ಷಿಸಿರಿ !**

卐 ಗಂಗಾನದಿಯನ್ನು ಕಲುಷಿತಗೊಳಿಸುವ ಘಟಕಗಳಾವುವು ?

卐 ಗಂಗೆಯ ಪ್ರವಾಹದಲ್ಲಿನ ಹರಿವು ಏಕೆ ಕಡಿಮೆಯಾಯಿತು ?

卐 'ಗಂಗಾ ಕೃತಿ ಯೋಜನೆ'ಯು ಏಕೆ ಯಶಸ್ವಿಯಾಗಲಿಲ್ಲ ?

卐 ಧರ್ಮಾಧಿಷ್ಠಿತ 'ಹಿಂದೂರಾಷ್ಟ್ರ'ದಲ್ಲಿ ಗಂಗೆಯನ್ನು ಹೇಗೆ ರಕ್ಷಿಸಲಾಗುವುದು ?